**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**

**ಟಮಕ, ಕೋಲಾರ-563 103**

**ಸಂಖ್ಯೆ: ಬೆಂ.ಉ.ವಿ.ವಿ/ರಾ.ಸೇ.ಯೋ/2019-20**

**ದಿನಾಂಕ: 20.12.2019**

**ಸುತ್ತೋಲೆ**

**ವಿಷಯ:** ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ ಹಾಗೂ ಇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ರಕ್ಷಣೆಯ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** ಯುಸೇಇ/ರಾಸೇಯೋ/2018-19/270. ದಿನಾಂಕ: 17/10/2018.

****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರ ಮತ್ತು ಇತರ ಚಟುವಟಿಕೆಗಳಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕ / ಸ್ವಯಂ ಸೇವಕೀಯರ ರಕ್ಷಣೆಯ ಕುರಿತಾಗಿ ಪತ್ರದ ಮೂಲಕ ಹಾಗೂ ಸಂಯೋಜನಾಧಿಕಾರಿಗಳ ಸಭೆಗಳಲ್ಲಿ ಹಲವು ಸೂಚನೆಗಳನ್ನು ನೀಡಲಾಗಿತ್ತು. ಆದರೆ ಕಳೆದ 6 ವರ್ಷಗಳಲ್ಲಿ 9 ಸ್ವಯಂ ಸೇವಕರು ಮೃತಪಟ್ಟಿದ್ದಾರೆ. ಅಲ್ಲದೇ ದಿನಾಂಕ: 15.10.2018ರಂದು ಕಾಲೇಜು ಒಂದರ ವಾರ್ಷಿಕ ಶಿಬಿರ ನಡೆಯುವ ಸಂದರ್ಭದಲ್ಲಿ ಕೆರೆಗೆ ಬಿದ್ದು, ಮೂವರು ವಿದ್ಯಾರ್ಥಿಗಳು ಮೃತ ಪಟ್ಟಿರುವುದು ದುರದೃಷ್ಟಕರವಾಗಿದೆ. ಮುಂದೆ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಮತ್ತು ಇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯ ಎನ್.ಎಸ್.ಎಸ್ ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರು ಈ ಕೆಳಗಿನ ಸಲಹೆಗಳನ್ನು ನೀಡಿರುತ್ತಾರೆ. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಸೇವಾ ಯೋಜನೆಗಳಿರುವ ಎಲ್ಲಾ ಕಾಲೇಜು ಘಟಕಗಳ ಕಾರ್ಯಕ್ರಮಾಧಿಕಾರಿಗಳು ಕಡ್ಡಾಯವಾಗಿ ಪಾಲಿಸಲು ಕೋರಲಾಗಿದೆ.

ಕೆರೆ ಸರೋವರ, ಸಮುದ್ರ, ಅಣೆಕಟ್ಟುಗಳ ಪಕ್ಕದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳನ್ನು ನಡೆಸದಿರುವುದು ಹಾಗೂ ಈ ಸ್ಥಳಗಳಲ್ಲಿ ಟ್ರಕಿಂಗ್ ಇತ್ಯಾದಿಗಳನ್ನು ಕೈಗೊಳ್ಳದಿರುವುದು.

**ವಿಶೇಷ ವಾರ್ಷಿಕ ಶಿಬಿರಗಳ ಸಂದರ್ಭದಲ್ಲಿ ವಾಹನ ಸೌಲಭ್ಯಗಳನ್ನು ಹೊಂದಿರುವುದು.**

1. ಕಾರ್ಯಕ್ರಮಗಳ ಕುರಿತಾಗಿ ಸ್ಥಳೀಯ ಪೋಲೀಸ್ ಠಾಣೆಗೆ ಲಿಖಿತ ಮಾಹಿತಿ ನೀಡುವುದು.
2. ಆಸ್ಪತ್ರೆ, ಪೋಲೀಸ್ ಠಾಣೆ, ಅಗ್ನಿಶಾಮಕ ದಳ ಮತ್ತು ಸಂಘಟನೆಗೆ ಸಹಾಯ ಮಾಡುವ ವ್ಯಕ್ತಿಗಳ ದೂರವಾಣಿ ಸಂಖ್ಯೆಗಳನ್ನು ಬರೆದಿಟ್ಟುಕೊಳ್ಳುವುದು ಮತ್ತು ಪ್ರಕಟಿಸುವುದು.
3. ಅಪಾಯಕಾರಿ ಪ್ರದೇಶಗಳಲ್ಲಿ ಛಾಯಾಚಿತ್ರಗಳನ್ನು ತೆಗೆದುಕೊಳ್ಳದಂತೆ ಕಟ್ಟು ನಿಟ್ಟಾಗಿ ಸೂಚಿಸುವುದು.
4. ಶಿಬಿರಗಳು ಮತ್ತು ಹೊರ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸ್ವಯಂ ಸೇವಕ / ಸೇವಕಿಯರ ಪಾಲಕರಿಗೆ ಮಾಹಿತಿ ನೀಡಿ ಲಿಖಿತ ಒಪ್ಪಿಗೆ ಪಡೆಯುವುದು.
5. ಭಾವೈಕ್ಯತಾ ಶಿಬಿರ, ಯುವಜನೋತ್ಸವ, ಸಾಹಸ ಶಿಬಿರ, ಇತ್ಯಾದಿಗಳಲ್ಲಿ ಭಾಗವಹಿಸುವಾಗ ಇಂಡೆಮಿನೆಂಟ್ ಬಾಂಡ್‌ನ್ನು ಕಡ್ಡಾಯವಾಗಿ ಬರೆಸಿಕೊಳ್ಳುವುದು.
6. ದೈಹಿಕ ಅನಾರೋಗ್ಯವಿರುವ ಸ್ವಯಂ ಸೇವಕ/ಸೇವಕಿಯರು ಕಡ್ಡಾಯವಾಗಿ ಶಿಬಿರಗಳಲ್ಲಿ ಭಾಗವಹಿಸದಂತೆ ಸೂಚಿಸುವುದು.
7. ಶಿಬಿರಗಳಲ್ಲಿ ಕಡ್ಡಾಯವಾಗಿ ಮಹಿಳಾ ಅಧ್ಯಾಪಕರನ್ನು ನಿಯೋಜಿಸುವುದು.
8. ಶಿಬಿರದ ಕಾರ್ಯಕ್ರಮಗಳು ನಡೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ಮೊಬೈಲ್‌ಗಳನ್ನು ನಿಷೇಧಿಸುವುದು.
9. ಸ್ವಯಂ ಸೇವಕ/ಸೇವಕಿಯರಿಗೆ ಶಿಬಿರಕ್ಕೆ ಸಂಬಂಧಿಸಿದ ನಿಯಮಗಳನ್ನು ಸಭೆ ಕರೆದು ಸ್ಪಷ್ಟವಾಗಿ ವಿವರಿಸಿ ಲಿಖಿತವಾಗಿ ನೀಡಿ ಸಹಿ ಪಡೆಯುವುದು.



Scanned by CamScanner

ಈ ಮೇಲಿನ ಸೂಚನೆಗಳನ್ನಲ್ಲದೆ ಸ್ಥಳೀಯ ಅಗತ್ಯ ತಕ್ಕಂತೆ ಸೂಚನೆಗಳನ್ನು ಪಾಲಿಸುವುದು ಈ ಮೇಲಿನ ಸೂಚನೆಗಳನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ರಾಷ್ಟ್ರೀಯ ಸೇವಾ ಯೋಜನೆಗಳಿರುವ ಎಲ್ಲಾ ಕಾಲೇಜು ಘಟಕಗಳು ಕಡ್ಡಾಯವಾಗಿ ಪಾಲಿಸುವುದು.

ವಂದನೆಗಳೊಂದಿಗೆ.

**ಇವರಿಗೆ,**
ಪ್ರಾಂಶುಪಾಲರು/ಕಾರ್ಯಕ್ರಮಾಧಿಕಾರಿಗಳು.
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ
ರಾಷ್ಟ್ರೀಯ ಸೇವಾ ಯೋಜನೆಗಳಿರುವ ಎಲ್ಲಾ ಕಾಲೇಜು ಘಟಕಗಳಿಗೆ

30/12/2019

ಕುಲಸಚಿವರು

**ಪ್ರತಿಗಳು:**

1. ರಾಜ್ಯ ಎನ್.ಎಸ್.ಎಸ್ ಅಧಿಕರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
2. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
3. ಕಛೇರಿ ಪ್ರತಿ.



Scanned by CamScanner